ಕಥೆ

# ಹಾಸಿಗೆ ಪತ್ತೇವು




## ಅಮರೇಶ ಗಿಣಿವಾರ

ಕಲೆ: ವಿಶ್ವನಾಥ ಎ.ಎಸ್.


ಫಟೆಟೆಟೆಟೆ.... ಅಂತ ಒಂದು ಅನುಮಾದ್ಧ ಹೂಸು ಬಿಟ್ಟು, ವತ್ತೊಂಡಿದ್ರೂ ಹಾಸಿಗೆ ಮ್ಯಾಲೆ ಉಳ್ಳ್ಯಾಡಕ್ಯಾಂತ ಬಿದ್ದಿದ್ದ ಗಂಡ ಪರ್ರ್ಗ್ಯೆ ಅವಳೆಪ್ಪಗ ಮಾರೆಮ್ಮ ಒಂದೇಟು ಪೆಕ್... ಅಂತ ಜಾಡಿಸಿ ಒದ್ದಳು. ಒದ್ದೇಟಿಗೆ ಇನ್ನ ಮುಕಳ್ಯಾಗ ಅರ್ಧ ಉಳಕಂಡಿದ್ದ ಹೂಸು 'ಟೆಫ್' ಅಂತ ಸಿಡಿಯಿತು. 'ಎದ್ದೇಳಾ ಶನಿಗೇಡಿ ಎಷ್ಟಮಕ್ಕಂತಿ' ಅಂತ ಮಾರೆಮ್ಮ ಆತನ ಬುಡಕಳ ಹಾಸಿಗೆನ ಕಿತ್ತಿ ಮಡಚಿಟ್ಟಳು.

ಮಾರೆಮ್ಮ ಸ್ವಲ್ಪ ಗಂಡುಬೀರಿ. ಸಿಟ್ಟು ಬಂದರ ಹೇಳ್ದಕೇಳ್ದ ಒದ್ದುಬಿಡುತ್ತಿದ್ದಳು. ಗಂಡ-ಹೆಂಡತಿ ಸಂಬಂಧಾನ ಒಂದೇ ಮಾತಿನ್ಯಾಗ ಹೇಳಬೇಕಂದ್ರ 'ಅವಳೆಪ್ಪನ ಬಾಯಿ ಸರಿಗಿಲ್ಲ, ಮಾರೆಮ್ಮಂದು ಕಾಲು ಸರಿಗಿಲ್ಲ'. ಅವಳೆಪ್ಪ ಬಾಯಿಗೇನು ಸಿಗುತ್ತ ವಲಸುವಲಸು ಪದಗಳನ್ನ ಸಾಲುಕ ಒಂದರಿಂದ ಒಂದು ಪೋಣಿಸಿ ಬೈಯ್ತಾನ, ಮಾರೆಮ್ಮ ಯಾವಾಗ್ಲೂ ಒದಿಬೇಕಂತ ಕಾಲು ನಿಲ ಎತ್ತಿಟಗೊಂಡು ನಿಂತಿರತಾಳ. ವದ್ದೇಟಿಗೆ ಕುಂಡೆ ತಿಕ್ಕ್ಯಾಂತ ಕುಂತಿದ್ದ ಅವಳೆಪ್ಪ, 'ಲೇ ಸೂಳೆ ತೊಲ್ಡು ಆಪ್ರಿಶನ್ನ ಆಗ್ಯಾದ, ಕುಂಡಿಗೆ ವದಿಬ್ಯಾಡ ಅಂತ ಎಷ್ಟು ಹೇಳಬೇಕು' ಅಂದಾಗ ಮತ್ತೆ ಡುಬ್ಬಕ ಒದ್ದಳು. 'ಅಲಲೇ ಮಾರೆಕ್ಕ ನನ್ನ ಮೈಯಾಗ ಸಗತಿ ಇದ್ದಿದ್ರ ನಿನ್ನೆಲಬು ಪುಡಿಪುಡಿ ಮಾಡತಿದ್ದೆ. ಏನು ನನ್ನಣೆಬರಹ ಸರಿಯಿಲ್ಲ' ಅಂದಾಗ 'ಅಯ್ಯಯ್ಯ ಸಗತಿ ಇಲ್ಲೇನಪ್ಪಾ ರಾತ್ರಿ ಬರುತ್ತೈತಲ್ಲಾ! ಅದೆಂತದದು ಸಗತಿ? ಬಂಗಾಲಿ ಡಾಕ್ತ್ರ ಹೇಳ್ಯಾರ ಆಪ್ರಿಶನ್ನ ಆಗ್ಯದ ಹಾಸಿಗೆ ಪತ್ತೇವು ಮಾಡಂತ, ಸುಮ್ನೆ ಮಕ್ಕಂತಿದ್ದ್ಯಾ? ಇಲ್ಲ. ಎಷ್ಟೈತೆಪ್ಪ ನಿನ್ನ ತಿಂಡಿ. ತಿಂಡಿಸಲುವಾಗಿ ಜೀವ ಕಳ್ಕಂಡಿಯಾ ಕೋಡಿ' ಅಂತ ಬಾಯಗಿಟಕೊಂಡಿದ್ದ ಕರೆಇದ್ಲಿನ ಪಿತಕ್ ಪಿತಕ್ ಅಂತ ಉಗುಳಿದಳು. 'ಲೇ ನೀವು ಚಿಗರೆಕುಲದೋರು, ನಿಮ್ಮ ಮೂಗು ಹಾರಿದರ ನಾವು ಮೂರುಗಾವು ದೂರ ಬೀಳತೀವಿ... ನೀನು ಬಗಲಾಗ ಕರಕಳ್ಳಿಲ್ಲಂದ್ರ ಇನ್ನೊಬ್ಬಳ ನೋಡ್ತಿನಿ. ಕವಣೆ ಹಿಡಕಂಡ ಗುಬ್ಬೆ ಕಾಯಕೊಂಟ್ರ, ಸೂಳೇರು ಕಾಂವ್...ಕಾಂವ್... ಅಂತ ಕಾಗಿ ಕರದಾಂಗ ಕರಿತ್ಯಾರಲೇ ಮಾರೆವ್ವ' ಅಂದಾಗ ಮತ್ತೆ ಅವನ ಜುಟ್ಟ ಹಿಡಿದು, 'ಲೋ ನನ್ನ ತವರಮನೇರು ಹೆಸ್ರು ಎತ್ತಲಿಲ್ಲಂದ್ರ ನಿನಗ ತಿಂದು ಕೂಳು ಅರಗಲ್ಲೇನಲೋ' ಅಂದು ತಲೆನ ಮಜ್ಜಿಗೆ ಮಾಡೊ ಕಡಗಾಲು ಅಲ್ಲಾಡಿಸಿದಂಗ ಅಲ್ಲಾಡಿಸಿದಳು. ಆಪ್ರಿಶನ್ನ ಮಾಡಿಸಿಕೆಂಬೋದಕ್ಕಿಂತ ಮುಂಚೆ ಹುಟ್ಟಿದವು ಎರಡೆಣ್ಣು ಮಾಯಾಕಿ, ಬೋಗಕ್ಕ ತಮ್ಮ ಮೂಗಿನ್ಯಾಗ ಕಾಯಿಸಿದ ತುಪ್ಪ ಸೋರಿದಂಗ ಸೋರತಿದ್ದ ಸಿಂಬಳಾನ ಗ್ವಾಡಿಗಿ ತಿಕ್ಕಿ ತಮ್ಮ ಗಗ್ಗರಿಲೆ ಮೂಗನ್ನ ತಿಕ್ಕಿ, ತಿಕ್ಕಿ ಮೂಗು ಮತ್ತು ಬಾಯಿ ನಡುವಿನ ಪ್ರದೇಶವನ್ನ ಕೆಂಪಗ ಮಾಡಿಬಿಟ್ಟಿದ್ದವು. ಗ್ವಾಡೆ ನೋಡಿ ಸಿಟ್ಟೆಳಕಂಡ ಮಾರೆಮ್ಮ ಎರಡುದ್ರಿಗೆ ತಲಿಗೊಂದೇಟು ಕೊಟ್ಟು,